**ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.**

ದಿನಾಂಕ: 15.06.2024 ರಂದು ಮುಂಜಾನೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯ (ಆನ್‌ಲೈನ್) ನಡವಳಿಗಳು.

**ವಿಶೇಷ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಪ್ರೊ. ಪಿ. ಭಾಸ್ಕರ್ – ಸದಸ್ಯರು
3. ಡಾ. ಇಕ್ಬಾಲ್ ಶೇಖ್, – ಸದಸ್ಯರು (ಆನ್‌ಲೈನ್)
4. ಡಾ. ಎ.ಆರ್. ಪುರವಂತ, – ಸದಸ್ಯರು (ಆನ್‌ಲೈನ್)
5. ಶ್ರೀ. ಶಿವಪ್ರಸಾದ ವೈ – ಸದಸ್ಯರು (ಆನ್‌ಲೈನ್)
6. ಶ್ರೀ. ಎನ್. ಸತೀಶ, – ಸದಸ್ಯರು (ಆನ್‌ಲೈನ್)
7. ಶ್ರೀ. ಪಾಂಡು, – ಸದಸ್ಯರು (ಆನ್‌ಲೈನ್)
8. ಡಾ. ಮಲ್ಲಿಕಾರ್ಜುನ ಎಂ. ಕುಲಕರ್ಣಿ, – ಸದಸ್ಯರು (ಆನ್‌ಲೈನ್)
9. ಪ್ರೊ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು (ಆನ್‌ಲೈನ್)
10. ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
11. ಡಾ. ಜಿ.ಎಸ್. ಬಿರಾದಾರ, ಗ್ರಂಥಪಾಲಕರು – ಸದಸ್ಯರು
12. ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು (ಆನ್‌ಲೈನ್)

ಮೊದಲನೇಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಆನ್‌ಲೈನ್ (Online) ಸಭೆಗೆ ಆಗಮಿಸಿದ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಗುತ್ತದೆ.

| ಕಲಂ/ ಐಟಂ | ವಿಷಯ | ವಿದ್ಯಾವಿಷಯಕ ಪರಿಷತ್‌ನ ನಿರ್ಣಯ |
|---|---|---|
| 01. | ರಾಯಚೂರು ವಿಶ್ವವಿದ್ಯಾಲಯದ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸ್ ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳ ಆನ್‌ಲೈನ್ ಮುಖಾಂತರ ಸಲ್ಲಿಸಿದ ಅರ್ಜಿಗಳನ್ನು ಪರಿಶೀಲಿಸಿ ತುರ್ತಾಗಿ (Urgent) ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಪರಿಶೀಲಿಸಿ ತುರ್ತಾಗಿ ಸರ್ಕಾರಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಿ ಕೊಡುವ ಕುರಿತು. | ರಾಯಚೂರು ವಿಶ್ವವಿದ್ಯಾಲಯದ 2024–25ನೇ ಸಾಲಿನ ಸಂಯೋಜನೆಗಾಗಿ (For Affilation) ಹೊಸ ವಿಷಯ, ಹೊಸ ಕೋರ್ಸ್ ಪ್ರವೇಶ PG/BCA/BBA/BSW ಕೋರ್ಸ್‌ಗಳ ಮಿತಿ ಹೆಚ್ಚಳ ಮಂಜೂರಾತಿಗಾಗಿ ಕಾಲೇಜುಗಳು ಆನ್ಲೈನ್ ಮುಖಂತರ ಸಲ್ಲಿಸಿದ ಅರ್ಜಿಗಳನ್ನು ಸ್ಥಳಿಯ ತನಿಖಾ ಸಮಿತಿ ಸ್ಥಳ ಪರಿಶೀಲನ ಮಾಡಿ, ನೀಡಿದ ವರದಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿ ನಿದೇಶಕರಾದ ಡಾ. ರಾಘವೇಂದ್ರ ಫತ್ತೇಪೂರ ಇವರು ಸಭೆಯಲ್ಲಿ LIC ನೀಡಿದ ವರದಿಯನ್ನು ಸಭೆಗೆ ಮಂಡಿಸಿದರು. ಈ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಚರ್ಚಿಸಿ, ಅನುಮೋದಿಸಲಾಯಿತು.<br>ಸ್ಥಳೀಯ ತನಿಖಾ ಸಮಿತಿ ವರದಿಯಲ್ಲಿ ನೀಡಿದ ಶೀಫಾರಸ್ಸುಗಳಂತೆ ಈ ಕೆಳಕಂಡ ಕೋಷ್ಟಕದಲ್ಲಿ ನಮೂದಿಸಿದಂತೆ, |

| | | | | |
|---|---|---|---|---|
| **New Course** | | | | |
| 1 | 7230 | SRI VENKATESHWARA DEGREE COLLEGE | RAICHUR | New PG Course (MA Economics, Political Science) |
| 2 | 7315 | LOYOLA DEGREE COLLEGE | MANVI | New UG Course (BCA) |
| 3 | 7220 | VIVEKANANADA BCA COLLEGE RAICHUR | RAICHUR | New PG Course (MA Political Science, History) |
| 4 | 7258 | NAVAYUGA MSW COLLEGE | RAICHUR | New PG Course (MA Economics) + New UG Course (BA, Bcom) |
| 5 | 7121 | JMS MSW COLLEGE | DEODURGA | New Course (B.Com) |
| 6 | 8134 | SWAMY VIVEKANAND MSW COLLEGE | SHAHAPUR | New Course (BA, BSc) |
| 7 | 8034 | BILLAV Post Graduate COLLEGE M A HISTORY PG COLLEGE | HUNASAGI | New UG Course (BA Bcom) |
| **New Subject** | | | | |
| 8 | 7212 | LAXMI VENKATESH DESAI (LVD) COLLEGE | RAICHUR | New Subject (BSc Artificial Intelligence) |
| 9 | 8125 | SNEHA DEGREE COLLEGE | SHAHAPUR | New Subject (Sociology) |
| **Increase in Intake** | | | | |
| 10 | 7211 | BANKATLAL RAJARAM BOOB COMMERCE DEGREE COLLEGE(BRB) | RAICHUR | Increase in Intake (Mcom) |
| 11 | 7247 | SRI VENKATESHWARA PG COLLEGE | RAICHUR | Increase in Intake (Mcom) |
| 12 | 7229 | PURTIPPALI CHAGAL PARVATHAMMA BASANNA(SERD'S) DEGREE COLLEGE | RAICHUR | Increase in Intake (MCom, MA Economics) |
| 13 | 7233 | VRET P.G COLLEGE, RAICHUR | RAICHUR | Increase in Intake (MA Economics) |
| 14 | 7257 | SUNRISE MCOM COLLEGE | RAICHUR | Increase in Intake (M.Com) |
| 15 | 8017 | MAILARLINGESHWARA POST GRADUATION COLLEGE | RANGAMPET | Increase in Intake (MA English) |
| **Freah PA** | | | | |
| 16 | 7227 | VIVEKANANDA BPED COLLEGE | RAICHUR | Fresh PA |

ಈ ಎಲ್ಲಾ ವಿಷಯಗಳ ಕುರಿತ 16 ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದು ಎಂದು ಡಾಡಬಹುದು ಎಂದು ಡಾ. ರಾಘವೇಂದ್ರ ಫತ್ತೇಪೂರ ಅವರು ವಿವರಿಸಿದರು. ಈ ವಿಷಯ ಕುರಿತು ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ , ಸ್ಥಳೀಯ ತನಿಖಾ ಸಮಿತಿ ನೀಡಿರುವ ವರದಿಯನ್ನು ಒಪ್ಪಿಕೊಂಡು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಭೆಯಲ್ಲಿ ತೀರ್ಮಾನಿಸಿ, ಅನುಮೋದಿಸಲಾಯಿತು.

| | | |
|---|---|---|
| 02. | 2024–25ನೇ ಶೈಕ್ಷಣಿಕ ಸಾಲಿನಿಂದ ಕರ್ನಾಟಕ ಶಿಕ್ಷಣ ನೀತಿ ಆಯೋಗದ ಮಧ್ಯಂತರ ವರದಿಯ ಅನುಬಂಧ–1 ಮತ್ತು 2ನ್ನು ರಾಯಚೂರು ವಿಶ್ವವಿದ್ಯಾಲಯದಲ್ಲಿ ಸ್ನಾತಕ ಕೋರ್ಸುಗಳಿಗೆ ಅನುಷ್ಠಾನ ಮಾಡುವ ಕುರಿತು. | ರಾಜ್ಯ ಶಿಕ್ಷಣ ನೀತಿ ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ಮಧ್ಯಂತರ ವರದಿಗಳಲ್ಲಿನ ಶಿಫಾರಸ್ಸುಗಳನ್ನು 2024–25 ಶೈಕ್ಷಣಿಕ ಸಾಲಿನಿಂದ ಪದವಿ ಕಾರ್ಯಕ್ರಮಗಳಿಗೆ ಅನುಷ್ಠಾನಗೊಳಿಸಲು ಉದ್ದೇಶಿಸಿ ಸರ್ಕಾರದ ಆದೇಶ ಸಂಖ್ಯೆ:ಇಡಿ 166 ಯುಎನ್‌ಇ 2023, ಬೆಂಗಳೂರು ದಿನಾಂಕ: 08.05.2024. ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ವಯ ರಾಜ್ಯದಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿಯಲ್ಲಿ ವಿಶ್ವವಿದ್ಯಾಲಯಗಳು ಮತ್ತು ಸಂಯೋಜಿತ ಕಾಲೇಜುಗಳಲ್ಲಿ ಪದವಿ ಕಾರ್ಯಕ್ರಮಗಳಿಗೆ 2024–25ನೇ ಶೈಕ್ಷಣಿಕ ವರ್ಷದಿಂದ ಅನುಬಂಧ–1 (ಅನುಷ್ಠಾನದ ಮಾರ್ಗಸೂಚಿಗಳು) ಮತ್ತು ಅನುಬಂಧ–2 (ಪ್ರೋಗ್ರಾಮ್ ವಿನ್ಯಾಸ – Curriculum Structure) ರ ಮಾರ್ಗಸೂಚಿಗಳಿಗನುಸಾರವಾಗಿ ಪದವಿ ಕಾರ್ಯಕ್ರಮಗಳ ಅವಧಿ ಮತ್ತು ಪಠ್ಯಕ್ರಮವನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಿ ಆದೇಶಿಸಿಲಾಗಿರುವುದನ್ನು ಕುಲಸಚಿವರು ಸಭೆಗೆ ವಿವರಿಸಿದರು.<br><br>ಈ ಹಿನ್ನಲೆಯಲ್ಲಿ ವಿಶ್ವವಿದ್ಯಾಲಯವು ದಿನಾಂಕ:07.06.2024 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ, 2024–25ನೇ ಶೈಕ್ಷಣಿಕ ವರ್ಷದಲ್ಲಿ ಸ್ನಾತಕ ಪದವಿಗಳಾದ B.A, B.Com, B.Sc, BBA & BCA ಗಳಿಗೆ ರಾಯಚೂರು ವಿಶ್ವವಿದ್ಯಾಲಯದ ಹೊಸ SEP ಪಠ್ಯಕ್ರಮವನ್ನು ರಚಿಸುವ ಸಂಬಂಧ ಒಂದು ಸಮಿತಿಯನ್ನು ರಚಿಸಲು ಚರ್ಚಿಸಲಾಯಿತು. ಮಾನ್ಯ ಕುಲಪತಿಗಳ ನಿರ್ದೇಶನದಂತೆ ಕುಲಸಚಿವರು(ಮೌಲ್ಯಮಾಪನ) ಇವರ ಅಧ್ಯಕ್ಷತೆಯಲ್ಲಿ, ಸಭೆ ಜರುಗಲಾಯಿತು. ಆ SEP ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರಗಳ ವರದಿಯನ್ನು ಕಲಾ ಮತ್ತು ವಾಣಿಜ್ಯ ನಿಕಾಯದ ಡೀನರಾದ ಪ್ರೊ. ಪಿ.ಭಾಸ್ಕರ್ ಇವರು ವಿದ್ಯಾವಿಷಯಕ ಪರಿಷತ್ ಸಭೆಗೆ ವಿವರಿಸಿದರು.<br>ವಿದ್ಯಾವಿಷಯಕ ಪರಿಷತ್ ಸಭೆಯು ಸರ್ಕಾರದ ಆದೇಶ, ರಾಜ್ಯ ಶಿಕ್ಷಣ ನೀತಿಯಲ್ಲಿ ಸೂಚಿಸಿರುವ ಮಾರ್ಗಸೂಚಿಗಳು ಹಾಗೂ SEP ಸಮಿತಿಯ ವರದಿಯನುಸಾರ ಹೊಸ ಪಠ್ಯಕ್ರಮವನ್ನು 2024–25ನೇ ಶೈಕ್ಷಣಿಕ ಸಾಲಿನಿಂದ ಅಳವಡಿಸಿಕೊಳ್ಳವುದು ಮತ್ತು ಪಠ್ಯಕ್ರಮ ರಚನೆಗೆ ಸಂಬಂಧಪಟ್ಟ ಕಾರ್ಯಗಳನ್ನು ನೆರವೇರಿಸಲು ಸರ್ವಾನುಮತದಿಂದ ಸಮ್ಮತಿಸಿತು ಮತ್ತು ಮುಂದಿನ ಕ್ರಮಕ್ಕಾಗಿ ಸಿಂಡಿಕೇಟ್ ಸಭೆಗೆ ಕಳುಹಿಸಲು ಅನುಮೋದಿಸಲಾಯಿತು. |
| 03. | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು. | –– |

-15/6/24

**ಕುಲಸಚಿವರು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

15-6-2024.

**ಕುಲಪತಿಗಳು**
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು